# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಭಾ ನಡವಳಿ ನಿರ್ಣಯ

**ದಿನಾಂಕ: 05/01/2019 ರಂದು ನಡೆದ ವಾರ್ಡ್ ಸಂಖ್ಯೆ.31 ಕುಶಾಲನಗರದಲ್ಲಿ ನೆಡೆದ ವಾರ್ಡ್ ಸಮಿತಿಯ ತುರ್ತು-ಸಭಾ ನಡವಳಿ ನಿರ್ಣಯ**

ಸಭೆಯಲ್ಲಿ ಉಪಸ್ಥಿತರು

| ಕ್ರಮ ಸಂಖ್ಯೆ | ಸಭಾ ನಡವಳಿಯಲ್ಲಿ ಹಾಜರಿದ್ದವರ ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀಮತಿ. ಉಮ್ಮೇ ಸಲ್ಮಾ, ಖಮರ್ ಬಾಷ | ಮಾನ್ಯ ಅಧ್ಯಕ್ಷರು/ಪಾಲಿಕೆ ಸದಸ್ಯರು | |
| 2 | ಶ್ರೀ. ವೆಂಕಟೇಶ್ | ಸದಸ್ಯರು | |
| 3 | ಶ್ರೀಮತಿ.ಕಸ್ತೂರಿ | ಸದಸ್ಯರು | |
| 4 | ಶ್ರೀಮತಿ.ಜೆನ್ನಿಫರ್ | ಸದಸ್ಯರು | |
| 5 | ಶ್ರೀಮತಿ.ಫಾತಿಮಾ | ಸದಸ್ಯರು | |
| 6 | ಶ್ರೀಮತಿ. ಅಮ್ಮು | ಸದಸ್ಯರು | |
| 7 | ಶ್ರೀ. ಮೊಹಮ್ಮದ್ ಅನ್ಸರ್ | ಸದಸ್ಯರು | |
| 8 | ಶ್ರೀ.ಖಮರ್ ಬಾಷ | ಸದಸ್ಯರು | |
| 9 | ಶ್ರೀ.ಫೈರೋಜ್ ಖಾನ್ | ಸದಸ್ಯರು | |
| 10 | ಶ್ರೀ.ಜಾವೀದ್ ಪಾಷ | ಸದಸ್ಯರು | |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಂಖ್ಯೆ:**ಸ.ಕಂ.ಅ(ಪು.ನ)ಪಿಆರ್/ /18-19

ಸಹಾಯಕ ಕಂದಾಯ ಅಧಿಕಾರಿರವರ ಕಛೇರಿ,
(ಪುಲಿಕೇಶಿನಗರ)ಉಪವಿಭಾಗ, ಕ್ವೀನ್ಸ್ ರಸ್ತೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ :

ದಿನಾಂಕ: 08/01/2019 ರಂದು ವಾರ್ಡ್-31 ರ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-

**ಸಭೆಗೆ ಹಾಜರಿದ್ದವರು:**ಬಿಬಿಎಂಪಿ, ವಾರ್ಡ್ ಸಂಖ್ಯೆ: 31 ರ ಮಾನ್ಯ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ. ಉಮ್ಮೇ ಸಲ್ಮಾ, ಖಮರ್ ಬಾಷ

1. ಸಹಾಯಕ ಕಂದಾಯ ಅಧಿಕಾರಿ(ಕೆ.ಜಿ.ಹಳ್ಳಿ) ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀಮತಿ.ರಾಧ.ಚಂ.ಬಡಿಗೇರ
2. ವಾರ್ಡ್ ಸಮಿತಿಯ ಸಮಿತಿ ಸದಸ್ಯರು ಸಭೆಗೆ ಹಾಜರಿದ್ದರು.
3. ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಕೇಶಿನಗರ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ ಸ್ಟ್ರೀಟ್‌ಲೈಟ್/ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರು/ಕಛೇರಿ ನೌಕರರು.

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದ್ದಂತೆ ಕಾರ್ಯದರ್ಶಿಯಾದ ಸಹಾಯಕ ಕಂದಾಯ ಅಧಿಕಾರಿ, ಶ್ರೀಮತಿ.ರಾಧ.ಚಂ.ಬಡಿಗೇರ ರವರು ಪಾಲಿಕೆಯ ವಾರ್ಡ್ ಸಮಿತಿಯ ಅದ್ಯಕ್ಷರು ಹಾಗೂ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

**1. ಬೆಸ್ಕಾಂ:-**

ಮುಸ್ಲಿಂ ಕಾಲೋನಿಯ ಚಿಕ್ಕಗಲ್ಲಿ ಮತ್ತು ವಿಜಯಲಕ್ಷ್ಮಿ ಹೋಟೆಲ್ ಹಿಂಭಾಗದ ಟ್ರಾನ್ಸ್‌ಫಾರ್ಮರ್‌ನ್ನು ಸರಿಪಡಿಸುವುದು ಹಾಗೂ ತುಂಡಾದ ಕೇಬಲ್‌ಗಳನ್ನು ಸರಿಪಡಿಸುವುದು, ಕರುಮಾರಿಯಮ್ಮನಗರ, ಬಿಲಾಲ್ ನಗರ, ಅಶೋಕ ನಗರಗಳಲ್ಲಿ ಟ್ರಾನ್ಸ್‌ಫಾರ್ಮರ್‌ನ್ನು ಸರಿಪಡಿಸುವುದು ಹಾಗೂ ಮುಸ್ಲಿಂ ಕಾಲೋನಿಯ ಒಂಟಿ ಮನೆಗಳಿಗೆ ಮೀಟರ್ ಒದಗಿಸಿರುವ ಬಗ್ಗೆ ವಿವರಣೆ ನೀಡುವಂತೆ ಸೂಚಿಸಲಾಯಿತು. ಹಾಗೂ ಕೆಲವು ಪ್ರದೇಶಗಳಲ್ಲಿ ತುಂಬಾ ಹಳೆಯ ಪೋಲ್‌ಗಳಿದ್ದು, ಸದರಿ ಪೋಲ್‌ಗಳನ್ನು ಬದಲಾಯಿಸುವುದು ಹಾಗೂ ಪ್ರತಿ ಶುಕ್ರವಾರ ಮೂರು ಗಂಟೆ ವಿದ್ಯುತ್ ಕಡಿತಗೊಳಿಸುವುದನ್ನು ಸರಿಪಡಿಸುವ ಬಗ್ಗೆ ಮತ್ತೋಮ್ಮೆ ಸೂಚಿಸಿದರು.

**2. ಬಿಡಬ್ಲ್ಯೂಎಸ್‌ಎಸ್‌ಬಿ:-**

ಅನ್ವರ್ ಲೇಔಟ್, ದೊಡ್ಡಣ್ಣ ಲೇಔಟ್‌ನಲ್ಲಿ ಕಾಮಗಾರಿಯನ್ನು ಅತಿ ಜರೂರಾಗಿ ಮುಗಿಸುವುದು ಹಾಗೂ ಕೆಲವು ಕಡೆ ಗುಂಡಿ ತೆಗೆದಿರುವುದನ್ನು ಮುಚ್ಚಲು ಸೂಚಿಸಿದರು, ಹಾಗೂ 4ನೇ ಅಡ್ಡರಸ್ತೆ ಮತ್ತು 5ನೇ ಅಡ್ಡರಸ್ತೆಗಳಿಗೆ

ಕ್ಕೆ 2 ಬಾರಿ ಕುಡಿಯುವ ನೀರನ್ನು ಬಿಡುವುದು. ಮುಸ್ಲಿಂ ಕಾಲೋನಿಯ ಮಸೀದಿಯ ಹಿಂಭಾಗ ಪ್ಲಾಸ್ಟಿಕ್ ...ಪ್, ಮ್ಯಾನ್ ಹೋಲ್ ಇಲ್ಲದೆ ಇರುವುದರಿಂದ ಮ್ಯಾನ್ ಹೋಲ್ ಹಾಕಲು ಸೂಚಿಸಿ ಮುಂದಿನ ಸಭೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರನ್ನು ತಪ್ಪದೇ ಹಾಜರಾಗಲು ಸೂಚಿಸಿ, ಕರುಮಾರಿಯಮ್ಮನಗರದಲ್ಲಿ ವಾಟರ್ ಲಿಕೇಜ್ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವುದು, ರಾಮ ಟೆಂಟ್ ರಸ್ತೆಯಿಂದ ನಾಗವಾರ ಮುಖ್ಯರಸ್ತೆ ರೋಡ್ ಕಟಿಂಗ್ ಪರ್ಮಿಷನ್ ಪಡೆದಿರುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಿದರು.

**3. ಆರೋಗ್ಯ ಇಲಾಖೆ:-**

ನಾಗವಾರ ಮುಖ್ಯರಸ್ತೆಯಲ್ಲಿ ಕಸ ಹಾಕುತ್ತಿದ್ದು, ಸದರಿ ಜಾಗಗಳಲ್ಲಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳಿಗೆ ಲೈಸೆನ್ಸ್ ನೀಡಿ, ಸದರಿ ಜಾಗಗಳಲ್ಲಿ ಕಸ ಹಾಕದಂತೆ ಕ್ರಮ ವಹಿಸಿ ವ್ಯಾಪಾರ ಮಾಡಲು ಅನುವು ಮಾಡಿಕೊಟ್ಟು, ಅತಿ ಹೆಚ್ಚು ಕಸ ಹಾಕುವ ಸ್ಥಳಗಳಲ್ಲಿ ಸಿಸಿ ಟಿವಿ ಹಾಕಲು ಸೂಚಿಸಿದರು. ಹಾಗೂ ಚಿಕನ್ ಮತ್ತು ಮಟನ್ ಅಂಗಡಿಯವರಿಗೆ ಹಸಿ ಕಸ, ಒಣ ಕಸವನ್ನು ಬೇರ್ಪಡಿಸುವ ಬಗ್ಗೆ ಅರಿವು ಮೂಡಿಸಿ ಸ್ವಚ್ಛತೆಯನ್ನು ಕಾಪಾಡುವಂತೆ ಸೂಚಿಸಿ, ಬೇರ್ಪಡಿಸದ ಅಂಗಡಿಗಳಿಗೆ ನೋಟಿಸ್ ನೀಡಿ ಅಂಗಡಿಯನ್ನು ಮುಚ್ಚಲು ಕ್ರಮ ಜರುಗಿಸುವಂತೆ ಸೂಚಿಸಿದರು. ಅಶೋಕನಗರ ಸರ್ಕಾರಿ ಶಾಲೆ ಹಿಂದೆ ಕಸ ಡಂಪಿಗ್ ಮಾಡುತ್ತಿರುವುದನ್ನು ಪರಿಶೀಲಿಸಿ, ಸದರಿ ಜಾಗವನ್ನು ಕಸ ಹಾಕದಂತೆ ಕ್ರಮ ವಹಿಸಲು ಸೂಚಿಸಲಾಯಿತು.

**4. ಕಾಮಗಾರಿ ಇಲಾಖೆ:-**

ವಾರ್ಡ್-31ರ ಕೆಲವು ಕಾಂಕ್ರಿಟ್ ರಸ್ತೆಗಳಲ್ಲಿ ಕಾಂಕ್ರಿಟ್ ಕೀತ್ತು ಹೋಗಿದ್ದು, ಅಂತಹ ಕಡೆಗಳಿಗೆ ಕಾಂಕ್ರಿಟ್ ಹಾಕಿ ಸರಿಪಡಿಸುವಂತೆ ಸೂಚಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಿ, ಸರ್ಕಾರದಿಂದ 225 ಚದರ ಅಡಿಗಳ ನಿವೇಶನಕ್ಕೆ ಮನೆ ನಿರ್ಮಿಸಿಕೊಡಲು ಆದ್ಯತೆ ಇದ್ದು, ಇಂತಹ ಅನುಕೂಲವನ್ನು ಪಡೆಯಲು ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ದಾಖಲೆಗಳನ್ನು ತಯಾರಿಸಿಕೊಡುವಂತೆ ಸೂಚಿಸಿದರು ಹಾಗೂ ವಾರ್ಡ್-31 ರಲ್ಲಿ ವಾರ್ಡ್ ಕಛೇರಿ ನಿರ್ಮಿಸಲು ಸ್ಥಳವನ್ನು ಗುರುತಿಸುವಂತೆ ಸೂಚಿಸಿದರು.

**5. ಕಲ್ಯಾಣ ಇಲಾಖೆ:-**

ವಾರ್ಡ್-31 ಸಂಬಂದಿಸಿದಂತೆ ಕಲ್ಯಾಣ ಇಲಾಖೆಯಿಂದ ಬಡವರಿಗೆ ನೀಡುವ ಲ್ಯಾಪ್ ಟಾಪ್, ಆಟೋ ರೀಕ್ಷಾ, ಟೈಲರಿಂಗ್ ಯಂತ್ರ, ಕಾರುಗಳನ್ನು ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಪಟ್ಟಿಯಂತೆ ಪರಿಶೀಲಿಸಿ ನೀಡುವುದು ಹಾಗೂ ಟೈಲರಿಂಗ್ ತರಬೇತಿ ನೀಡಲು ಕ್ರಮ ವಹಿಸುವಂತೆ ಸೂಚಿಸಿದರು.

**6. ಪೋಲಿಸ್ ಇಲಾಖೆ:-**

ಟ್ರಾಫಿಕ್ ಪೋಲಿಸ್ ಮತ್ತು ಪೋಲಿಸ್‌ರವರನ್ನು ಮುಂದಿನ ಸಭೆಗೆ ಹಾಜರಾಗಲು ಸೂಚಿಸಿದರು, ಕೆಲವು ರಸ್ತೆಗಳಲ್ಲಿ ಪೋಲಿ ಹುಡುಗರು ಸುತ್ತಾಡುತ್ತಿದ್ದು, ಅವರನ್ನು ನಿಯಂತ್ರಿಸುವುದು ಹಾಗೂ ಕೆಲವು ಜಾಗಗಳಲ್ಲಿ ಪೋಲಿಸ್ ಚೌಕಿಗಳನ್ನು ನಿರ್ಮಿಸುವಂತೆ ಸೂಚಿಸಿದರು.

ಂದಾಯ ಇಲಾಖೆ:-

ಹೊಸದಾಗಿ ಮತದಾರರಪಟ್ಟಿಯಲ್ಲಿ ಹೆಸರು ನೊಂದಾಯಿಸಿರುವ ಮತದಾರರುಗಳಿಗೆ ಚುನಾವಣೆ ಗುರುತಿನ ಚೀಟಿಯನ್ನು ನೀಡಲು ಸೂಚಿಸಿದರು ಹಾಗೂ ಕಂದಾಯವನ್ನು ಪಾವತಿಸದೇ ಇರುವ ಶಾಲೆಗಳಿಗೆ ಕಂದಾಯವನ್ನು ನಿಗಧಿಪಡಿಸಿ, ಕಂದಾಯವನ್ನು ಪಾವತಿಸುವ ಬಗ್ಗೆ ವಿದ್ಯಾಧಿಕಾರಿಗಳಿಗೆ ಪತ್ರ ಬರೆಯಲು ಸೂಚಿಸಿ, ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು

ಕಾರ್ಯದರ್ಶಿ
ಸಹಾಯಕ ಕಂದಾಯ ಅಧಿಕಾರಿ
ಕಾಡುಗೊಂಡನಹಳ್ಳಿ ಉಪ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ವಾರ್ಡ್ ಸಮಿತಿಯ ಸದಸ್ಯರು. ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
12. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
13. ಕಛೇರಿ ಕಡತಕ್ಕೆ.
14. [illegible] (ಪೂರ್ವ)
AEE KG Halli Sub division. 4/2/19

4/2/19

4/2/2019

4/2/2019

ಜಂಟಿ ಆಯುಕ್ತರು (ಪೂರ್ವ)
ಮೆಯೋ ಹಾಲ್
ನಂ. Rd
ದಿನಾಂಕ 4-2-2019

Bruhat Bangalore Mahanagara Palike
Deputy Commissioner